**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ದಕ್ಷಿಣ ಕನ್ನಡ, ಮಂಗಳೂರು.</u>**

**<u>ಸೆಷನ್ಸ್ ಕೇಸ್ ನಂಬ್ರ 5/2024</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಮಾರುತಿ ಪಿ. | <u>ಪ್ರಾಸಾಃ 20</u> |
| ತಂದೆಯ ಹೆಸರು | : | ಶೇಶಪ್ಪ ಪಿ. | <u>ಚಾಸಾಃ 39</u> |
| ಪ್ರಾಯ | : | 31 ವರ್ಷ | **<u>ದಿನಾಂಕಃ 10.06.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪಿ.ಎಸ್.ಐ ಮಂಗಳೂರು ದಕ್ಷಿಣ ಪೊಲೀಸು ಠಾಣೆ | |
| ವಾಸಸ್ಥಳ | : | ಮಂಗಳೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನಾನು 23.05.2022 ರಿಂದ 14.02.2025 ರವರೆಗೆ ಮುಲ್ಕಿ ಪೊಲೀಸು ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 23.09.2023 ರಂದು ಪೋಲಿಸ್ ಸಿಬ್ಬಂದಿಗಳಾದ ಚಾಸಾ-30 ರಿಂದ 35 ರವರ ಜೊತೆ ಠಾಣಾ ವ್ಯಾಪ್ತಿಯ ತಾಳಿಪ್ಪಾಡಿ ಗ್ರಾಮದ ಪುನರೂರು ಚೆಕ್ ಪೋೖಂಟ್ ಬಳಿ ಕಿನ್ನಿಗೋಳಿಯಿಂದ ಮುಲ್ಕಿ ಕಡೆಗೆ ಹೋಗುವ ರಸ್ತೆಯಿಂದ ಮದ್ಯಾಹ್ನ 3 ಗಂಟೆಯಿಂದ ವಾಹನ ತಪಾಸಣೆ ಮಾಡುತ್ತಿರುವಾಗ, ಸಂಜೆ 4 ಗಂಟೆಗೆ ಕಿನ್ನಿಗೋಳಿ ಕಡೆಯಿಂದ ಮುಲ್ಕಿ ಕಡೆಗೆ ಬಜಾಜ್ ಡಿಸ್ಕವರಿ ಬೈಕ್ ನಲ್ಲಿ ಒಬ್ಬ ವ್ಯಕ್ತಿ ಚೆಕ್ ಪೋೖಂಟ್ ಕಡೆಗೆ ಬಂದಿದ್ದು ಸದರಿಯವರನ್ನು ನಿಲ್ಲಿಸಿ ವಾಹನದ ದಾಖಲೆಗಳನ್ನು ಕೇಳಲಾಗಿ, ಆತ ತಡವರಿಸಿ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳು ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ನಂತರ ವಾಹನವನ್ನು ಪರಿಶೀಲಿಸಿದಾಗ ಸದರಿ ಮೋಟಾರ್ ಸೈಕಲ್ ನಮ್ಮ ಠಾಣೆಯ ಅಪರಾಧ ಕ್ರಮಾಂಕ 85/2023 ರಲ್ಲಿ ಕಳುವಾದ ಬಗ್ಗೆ ಪ್ರಕರಣ ದಾಖಲಾಗಿದ್ದು, ನಂತರ ಆ ವ್ಯಕ್ತಿಯನ್ನು

ವಿಚಾರಿಸಿಲಾಗಿ, ನಮ್ಮ ಠಾಣೆಯ ಅಪರಾಧ ಕ್ರಮಾಂಕ 84/2023 ರಲ್ಲಿ ಚಿನ್ನದ ಚೈನನ್ನು ಸುಲಿಗೆ ಮಾಡಿದ ಬಗ್ಗೆ ಕೂಡ ತಿಳಿಸಿರುತ್ತಾನೆ. ನಂತರ ಆತನನ್ನು ಸಂಜೆ 4.15 ಗಂಟೆಗೆ ಸ್ಥಳದಲ್ಲಿ ದಸ್ತಗಿರಿ ಕ್ರಮ ಅನುಸರಿಸಿ 4.25 ರಿಂದ 5.15 ರವರೆಗೆ ತಪ್ಪೊಪ್ಪಿಗೆ ಹೇಳಿಕೆಯನ್ನು ಸ್ಥಳದಲ್ಲಿ ಪಡೆದಿರುತ್ತೇನೆ. ಆತ ತನ್ನ ಹೆಸರು ರಘು ಅಲಿಯಾಸ್ ರಾಘವೇಂದ್ರ ಮತ್ತು ದಾವಣಗೆರೆಯ ವಾಸಿ ಎಂದು ತಿಳಿಸಿರುತ್ತಾನೆ. ಆತನ ಹೇಳಿಕೆಯಂತೆ ಚಾಸಾ-8 ಮತ್ತು 9 ರವರನ್ನು ಸ್ಥಳಕ್ಕೆ ಕರೆಸಿ ಆರೋಪಿ ಹಾಜರುಪಡಿಸಿದ ಕೆಎ-19-ಇಸಿ-2398 ಬಜಾಜ್ ಡಿಸ್ಕವರಿ ಮೋಟಾರ್ ಸೈಕಲನ್ನು ಸಂಜೆ 5.35 ರಿಂದ 6.30 ರವರೆಗೆ ಸ್ವತ್ತು ಸ್ವಾಧೀನತಾ ಮಹಜರು ಮುಖೇನ ವಶಪಡಿಸಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-13(ಸಿ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಭಾವಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದೆ. ಅದರ ಪ್ರಯುಕ್ತ 65 ಬಿ ಪ್ರಮಾಣ ಪತ್ರವನ್ನು ಚಾಸಾ-31 ರವರಿಂದ ಪಡೆದಿರುತ್ತೇನೆ.

3. ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಠಾಣೆಗೆ ಹಾಜರಾಗಿ, ಸದರಿ ಸ್ವತ್ತನ್ನು ಸ್ವತ್ತುಪಟ್ಟಿ ಸಂಖ್ಯೆ 110/2023 ರಲಿ ನಮೂದಿಸಿ ಮಾನ್ಯ ನ್ಯಾಯಾಲಯದ ಮುಂದೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯ ವೈದ್ಯಕೀಯ ತಪಾಸಣೆ ಮಾಡಿಸಲು ಮುಲ್ಕಿ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯದಾಗ ಸದರಿ ಆರೋಪಿ ತನಗೆ ಮೂತ್ರ ವಿಸರ್ಜನೆ ಮತ್ತು ಟಿಬಿ ಸಮಸ್ಯೆ

ಇರುವುದಾಗಿ ವೈದ್ಯರ ಬಳಿ ತಿಳಿಸಿದ್ದರಿಂದ, ವೈದ್ಯಾಧಿಕಾರಿಯವರು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾರೆ. ಅದರಂತೆ ಆರೋಪಿಗೆ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ 24 ಗಂಟೆಗಳ ಒಳಗಾಗಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ಆಸಾಧ್ಯವಾದ್ದರಿಂದ, ಮಾನ್ಯ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-9, 30 ರಿಂದ 35 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

4. ದಿನಾಂಕ 24.09.2023 ರಂದು ಚಾಸಾ-36 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 30.09.2023 ರಂದು ಸದರಿ ಆರೋಪಿ ಜಿಲ್ಲಾ ವೆನ್ಲಾಕ್ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, ಆತನನ್ನು ಠಾಣೆಗೆ ಕರೆದುಕೊಂಡು ಬಂದು, ಪಂಚರಾದ ಚಾಸಾ-8 ಮತ್ತು 10 ರವರನ್ನು ಠಾಣೆಗೆ ಕರೆಸಿ, ಆರೋಪಿಗೆ ಮುಖ ಮುಸುಕು ಹಾಕಿ, ಆರೋಪಿಯು ತಾನು ಕೃತ್ಯ ಎಸಗಿದ ಜಾಗವನ್ನು ತೋರಿಸಿ ಕೊಡುವುದಾಗಿ ಹೇಳಿದ ಮೇರೆಗೆ ಠಾಣಾ ಪಿಸಿ ಆರ್ ವಾಹನದಲ್ಲಿ ನಾನು, ಆರೋಪಿ, ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಠಾಣೆಯಿಂದ ಹೊರಟು, ಉಡುಪಿಯಿಂದ ಮಂಗಳೂರು ಕಡೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಕಡೆಗೆ ಕೊಲ್ನಾಡು ಕಡೆಗೆ ಚಲಾಯಿಸಿಕೊಂಡು ಹೋಗುವಂತೆ ತಿಳಿಸಿದ್ದು, ಮಾರ್ಗ ಮಧ್ಯದಲ್ಲಿ ಚಂದ್ರಮೌಳೀಶ್ವರ ದೇವಸ್ಥಾನದ ಬಸ್ ನಿಲ್ದಾಣದ ಬಳಿ, ವಾಹನ ನಿಲ್ಲಿಸುವಂತೆ ಆರೋಪಿ ತಿಳಿಸಿದ್ದು, ಅದರಂತೆ ಬಸ್ ನಿಲ್ದಾಣದ ಬಳಿ ಕರೆದುಕೊಂಡು ಹೋಗಿ, ಇದೇ ಜಾಗದಿಂದ ಬಜಾಜ್ ಡಿಸ್ಕವರಿ ಮೋಟಾರು ಸೈಕಲನ್ನು ತಾನು ಕಳುವು

ಮಾಡಿರುವುದಾಗಿ ತಿಳಿಸಿರುತ್ತಾನೆ. ಸದರಿ ಸ್ಥಳದಲ್ಲಿ ಪೋಟೋ ತೆಗೆಸಿರುತ್ತೇನೆ.

5. ನಂತರ ಅಲ್ಲಿಂದ ಪೂರ್ವಕ್ಕೆ 100 ಮೀ ದೂರದಲ್ಲಿ ಎಡಕ್ಕೆ ಇರುವ ಮನೆಯ ಉತ್ತರಕ್ಕೆ ಇರುವ ಅಂಗಳಕ್ಕೆ ಕರೆದುಕೊಂಡು ಹೋಗಿ, ಮನೆಯ ಸಿಟ್ ಔಟ್ ನ್ನು ತೋರಿಸಿ, ಅದೇ ಸ್ಥಳದಿಂದ ನಾನು, 2ನೇ ರಿಂದ 5ನೇ ಆರೋಪಿಗಳು ಕಾರಿನಲ್ಲಿ ಬಂದು, ಚಾಸಾ-1 ರವರ ಚಿನ್ನದ ಸರವನ್ನು ಸುಲಿಗೆ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿರುತ್ತಾನೆ. ಈ ಬಗ್ಗೆ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರನ್ನು ತಯಾರಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-15(ಬಿ)** ಎಂದು ಗುರುತಿಸಲಾಯಿತು. ಚಾಸಾ-1 ರವರ ಮನೆಯ ಎದುರುಗಡೆ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿರುತ್ತದೆ. ನಾವು ವಶಪಡಿಸಿಕೊಂಡ ಮೋಟಾರುಸೈಕಲ್ ಗಳ ಪೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-17(4) ಎಂದು ಗುರುತಿಸಲಾಗಿರುತ್ತದೆ. ಸದರಿ ಮಹಜರನ್ನು ಮದಾಹ್ನ 2.45 ರಿಂದ 3.45 ರವರೆಗೆ ತಯಾರಿಸಲಾಗಿರುತ್ತದೆ. ಅದರ ಪ್ರಯುಕ್ತ 65 ಬಿ ಪ್ರಮಾಣ ಪತ್ರವನ್ನು ಚಾಸಾ-31 ರವರಿಂದ ಪಡೆದಿರುತ್ತೇನೆ. ಸದರಿ 65 ಬಿ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-33** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-33(ಎ)** ಎಂದು ಗುರುತಿಸಲಾಯಿತು.

6. ಅದೇ ದಿನ ಚಾಸಾ-8, 10, 30, 31, 33 ರವರ ಹೇಳಿಕೆಗಳನ್ನು ಮತ್ತು ಚಾಸಾ-5 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಆರೋಪಿಯನ್ನು

ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ಈ ಪ್ರಕರಣದ ಕಡತವನ್ನು ಚಾಸಾ-40 ರವರಿಗೆ ಹಸ್ತಾಂತರಿಸಿರುತ್ತೇನೆ.

7. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ವಿ.ಸಿ ಮುಖಾಂತರ ಹಾಜರುಪಡಿಸಿದ 1ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ 1, 2 ಮತ್ತು 6ನೇ ಆರೋಪಿ ಪರ ಶ್ರೀ ಜಿ.ವಿ.ಜಿ. ವಕೀಲರಿಂದಃ</u>**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ 3 ಮತ್ತು5ನೇ ಆರೋಪಿ ಪರ ಶ್ರೀ.ವಿ.ಆರ್.ಎ. ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ, ಮನೆಯ ಸಿಟ್ ಔಟ್ ನ್ನು ತೋರಿಸಿ, ಅದೇ ಸ್ಥಳದಿಂದ 2ನೇ ರಿಂದ 5ನೇ ಆರೋಪಿಗಳು ಕಾರಿನಲ್ಲಿ ಬಂದಿದ್ದಾರೆ ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.